# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ರಾಮಮನೋಹರ ಲೋಹಿಯಾ ಅಧ್ಯಯನ ಪೀಠ**

ಮತ್ತು **ಪ್ರಸಾರಾಂಗದ** ಸಹಯೋಗದಲ್ಲಿ

**ಕರಡು ತಿದ್ದುಪಡಿ ಮತ್ತು ಪುಟವಿನ್ಯಾಸ ಕಾರ್ಯಾಗಾರ**

**20 ರಿಂದ 24 ಮೇ 2024ರ ಐದು ದಿನಗಳವರೆಗೆ**

ಕಾರ್ಯಾಗಾರದ ಪತ್ರಿಕಾ ಪ್ರಕಟಣೆ–20.5.2024

## ಸಂಶೋಧನೆಯಲ್ಲಿ ಕರಡುತಿದ್ದುಪಡಿಯೂ ಪ್ರಮುಖ ಘಟ್ಟ : ಡಾ.ಡಿ.ವಿ.ಪರಮಶಿವಮೂರ್ತಿ

ಸಂಶೋಧನೆಯ ವಿದ್ವತ್ ಲೋಕದಲ್ಲಿ ಹೊಸ ವಿಷಯಗಳ ಚಿಂತನೆಯಷ್ಟೇ, ಬರವಣಿಗೆ ಮತ್ತು ಅದರ ಪರಿಷ್ಕರಣೆಯೂ ತುಂಬಾ ಮುಖ್ಯವಾಗಿದ್ದು, ಸಂಶೋಧನೆಯಲ್ಲಿ ಕರಡುತಿದ್ದುಪಡಿಯೂ ಪ್ರಮುಖವಾದ ಘಟ್ಟವಾಗಿದೆ ಎಂದು ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ **ಡಾ.ಡಿ.ವಿ.ಪರಮಶಿವಮೂರ್ತಿ** ಅವರು ಅಭಿಪ್ರಾಯಪಟ್ಟರು.



ಐದು ದಿನಗಳ ಕರಡು ತಿದ್ದುಪಡಿ ಮತ್ತು ಪುಟವಿನ್ಯಾಸ ಕಾರ್ಯಾಗಾರವನ್ನು ಗಣ್ಯರು ಉದ್ಘಾಟಿಸುತ್ತಿರುವುದು.

ಕನ್ನಡ ವಿಶ್ವವಿದ್ಯಾಲಯದ ಪಂಪ ಸಭಾಂಗಣದಲ್ಲಿ ದಿನಾಂಕ 20.5.2024ರಂದು **ರಾಮಮನೋಹರ ಲೋಹಿಯಾ ಅಧ್ಯಯನ ಪೀಠ** ಮತ್ತು **ಪ್ರಸಾರಾಂಗದ** ಸಹಯೋಗದಲ್ಲಿ ಆಯೋಜಿಸಿದ್ದ **ಐದು ದಿನಗಳ(20 ರಿಂದ 24 ಮೇ 2024ರವರೆಗೆ)**ವರೆಗೆ **ಕರಡು ತಿದ್ದುಪಡಿ ಮತ್ತು ಪುಟವಿನ್ಯಾಸ ಕಾರ್ಯಾಗಾರದ** ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಂಶೋಧನಾ ಬರವಣಿಗೆಯಲ್ಲಿ ವ್ಯಾಕರಣ ದೋಷಗಳಾಗದಾಗ, ವಿಷಯದ ಅರ್ಥವ್ಯತ್ಯಾಸವಾಗುವುದು. ಇದರಿಂದ ಪರಿಣಾಮಕಾರಿ ಸಂವಹನ ಸಾಧ್ಯವಾಗುವುದಿಲ್ಲ. ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಮಹಾಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದಾಗ ಹೆಚ್ಚಿನ ಮೌಲ್ಯಮಾಪಕರು ಈ ಮಹಾಪ್ರಬಂಧದಲ್ಲಿ ಅಕ್ಷರ ದೋಷಗಳಿವೆ ಎಂದು ವರದಿ ಬರೆಯುತ್ತಾರೆ. ಇತರೆ ವಿಶ್ವವಿದ್ಯಾಲಯಗಳ ಸಂಶೋಧನಾ ಪ್ರಬಂಧಗಳಲ್ಲಿ ತಪ್ಪುಗಳಾದರೆ ಹೋಗಲಿ ಎಂದು ಹೇಳಬಹುದು. ಕನ್ನಡ ಭಾಷೆ, ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಕನ್ನಡ ವಿಶ್ವವಿದ್ಯಾಲಯದ ಸಂಶೋಧನೆಗಳಲ್ಲಿ ಅಕ್ಷರ ದೋಷಗಳು, ವಾಕ್ಯದೋಷಗಳಾದರೆ ಅದರಿಂದ ವಿಶ್ವವಿದ್ಯಾಲಯದ ಘನತೆಗೆ ಚ್ಯುತಿ ಬರುತ್ತದೆ. ಇನ್ನು ಮುಂದಿನ ದಿನಗಳಲ್ಲಿ ಸಂಶೋಧನಾರ್ಥಿಗಳು ತಮ್ಮ ಮಹಾಪ್ರಬಂಧವನ್ನು ತಾವೇ ಕರಡು ತಿದ್ದುಪಡಿ ಮಾಡಿ, ಪುಟವಿನ್ಯಾಸ ಮಾಡಲು ಈ ಕಾರ್ಯಾಗಾರವು ಸಹಕಾರಿಯಾಗಲಿದೆ. ಇದರ ಪೂರ್ಣ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆಯಬೇಕೆಂದು ಕಿವಿಮಾತು ಹೇಳಿದರು.

ಪ್ರಸಾರಾಂಗದ ನಿರ್ದೇಶಕರಾದ **ಡಾ.ಮಾಧವ ಪೆರಾಜೆ** ಅವರು ಮಾತನಾಡುತ್ತ ಸಂಶೋಧನಾರ್ಥಿಗಳು ತಮ್ಮ ಸಂಶೋಧನೆಯ ಮಹಾಪ್ರಬಂಧವನ್ನು ಕರಡು ತಿದ್ದುಪಡಿ ಮಾಡಲು ಇತರರಿಗೆ ಹಣಕೊಟ್ಟು ಮಾಡಿಸುವುದರ ಬದಲು ತಾವೇ ಮಾಡುವುದು ಒಳ್ಳೆಯದು. ಇದರಿಂದ ಸಂಶೋಧನ ಪ್ರಬಂಧಗಳ ಗುಣಮಟ್ಟವನ್ನು ಕಾಪಾಡಬಹುದು ಎಂದು ತಿಳಿಸಿದರು.




ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅವರು ಮಾತನಾಡಿದರು.

ರಾಮಮನೋಹರ ಲೋಹಿಯಾ ಅಧ್ಯಯನ ಪೀಠದ ಸಂಚಾಲಕರಾದ **ಡಾ.ಯರ್ರಿಸ್ವಾಮಿ** ಅವರು ಗಣ್ಯರನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಶೋಧನಾ ವಿದ್ಯಾರ್ಥಿ ಮೋಹನ್‌ಕುಮಾರ್ ನಿರೂಪಿಸಿದರು. ವಿರುಪಾಕ್ಷ ಕೆ. ವಂದಿಸಿದರು. ಈ ಸಂದರ್ಭದಲ್ಲಿ ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




ಕಾರ್ಯಾಗಾರವನ್ನು ಕುರಿತು ಪ್ರಸಾರಾಂಗದ ನಿರ್ದೇಶಕ
ಡಾ.ಮಾಧವ ಪೆರಾಜೆ ಆಶಯ ನುಡಿಗಳನ್ನಾಡಿದರು.



ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠ
ಸಹಯೋಗ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬, ಕರ್ನಾಟಕ

ಐದು ದಿನಗಳ
ಕರಡು ತಿದ್ದುಪಡಿ ಮತ್ತು ಪುಟ ವಿನ್ಯಾಸ ಕಾರ್ಯಾಗಾರ
೨೦-೨೪ ಮೇ ೨೦೨೪

ಪ್ರಾಸ್ತಾವಿಕ
ಡಾ. ಯರ್ರಿಸ್ವಾಮಿ ಈ.
ಸಂಚಾಲಕರು, ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠ, ಕವಿಹಂ

ಅಧ್ಯಕ್ಷತೆ
ಡಾ. ಡಿ.ವಿ. ಪರಮಶಿವಮೂರ್ತಿ
ಮಾನ್ಯ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಶಯ ನುಡಿ
ಡಾ. ಮಾಧವ ಪೆರಾಜೆ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ನೋಂದಣಿಗಾಗಿ ಗೂಗಲ್ ಫಾರಂ ಲಿಂಕ್
https://forms.gle/QZNVBfnZfc91M76WA

ವಿಶೇಷತೆಗಳು
- ಎಂ.ಎ., ಪಿಎಚ್.ಡಿ. ಅಧ್ಯಯನ ಮಾಡುತ್ತಿರುವ ಅವರಣದ ೬೦ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ
- ನೋಂದಣಿ ಉಚಿತ ಮತ್ತು ಹಾಜರಾತಿ ಕಡ್ಡಾಯ
- ಉಪನ್ಯಾಸದ ಜೊತೆ ಪ್ರಾಯೋಗಿಕ ತರಗತಿಗಳಿವೆ
- ಪ್ರಮಾಣ ಪತ್ರ ನೀಡಲಾಗುವುದು

೨೦ ಮೇ ೨೦೨೪, ೧೧ ಗಂಟೆ, ಪಂಪ ಸಭಾಂಗಣ

ತಮಗೆ ಆದರದ ಸ್ವಾಗತ

ಡಾ. ಯರ್ರಿಸ್ವಾಮಿ ಈ.
ಸಂಚಾಲಕರು, ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠ, ಕವಿಹಂ

ಡಾ. ಮಾಧವ ಪೆರಾಜೆ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡಾ. ವಿಜಯ್ ಪೂಣಚ್ಚ ತಂಬಂಡ
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

